# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | THURsDAY | 23-2-2023 |
|---|---|---|---|---|



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಪೂರೈಕೆ ಇಳಿಕೆ ಜಾಗತಿಕ ಕಾಫಿ ಮಾರುಕಟ್ಟೆ ದರ ಹೆಚ್ಚಳ

ಅಕ್ಟೋಬರ್ 2022 ರಿಂದ ಡಿಸೆಂಬರ್ ಅವಧಿಯ ಜಾಗತಿಕ ಕಾಫಿ ರಫ್ತು ಹಿಂದಿನ ವರ್ಷದ ಈ ಅವಧಿಯಲ್ಲಿದ್ದುದರಿಂದ 2.8 ಶೇಕಡಾ ಇಳಿಕೆಯಾಗಿ 30.27 ಮಿಲಿಯನ್ ಚೀಲ ಗಳಾಗಿವೆಯೆಂದು ICO ತಿಳಿಸಿದ ನಂತರ ಜಾಗತಿಕ ಕಾಫಿ ದರ ಹೆಚ್ಚಳವಾಗಲಾರಂಭಿಸಿದೆ. ಬ್ರೆಜಿಲ್‌ನ ಹಸಿರು ಕಾಫಿ ರಫ್ತು 18.5 ಶೇಕಡಾ ಇಳಿಕೆಯಾಗಿ 2.52 ಮಿಲಿಯನ್ ಚೀಲಗಳಾಗಿವೆಯೆನ್ನಲಾಗಿದೆ. ಮಧ್ಯ ಅಮೇರಿಕಾದ ಕ್ವಾಟೆಮೋರಾದ ಕಾಫಿ ರಫ್ತು 8 ಶೇಕಡಾ ಇಳಿಕೆಯೊಂದಿಗೆ 172,439 ಚೀಲಗಳಾಗಿವೆಯೆನ್ನಲಾಗಿದೆ. ಜಾಗತಿಕ 2ನೇ ಅತಿ ಹೆಚ್ಚು ಕಾಫಿ ಬೆಳೆಸುವ ಕೊಲಂಬಿಯಾದ ಅರೆಬಿಕಾ ಕಾಫಿ ರಫ್ತು 19 ಶೇಕಡಾ ಇಳಿಕೆಯಾಗಿ 835,000 ಚೀಲಗಳಾಗಿವೆಯೆನ್ನಲಾಗಿದೆ. ವಿಯೆಟ್ನಾಂ ನ ಕಾಫಿ ರಫ್ತು 27.7 ಶೇಕಡ ಇಳಿಕೆಯಾಗಿ 142.544 ಟನ್‌ಗಳಾಗಿವೆ ಎನ್ನಲಾಗಿದೆ. ಬ್ರೆಜಿಲ್‌ನ ಕಾಫಿ ಉತ್ಪಾದನೆ ಪ್ರತಿಕೂಲ ಹವಾಮಾನದಿಂದ ಇಳಿಕೆಯಾಗಬಹುದೆನ್ನಲಾಗಿದೆ. ಅಲ್ಲದೆ ಹೆಚ್ಚಿನ ದರದ ನಿರೀಕ್ಷೆಯಿಂದ ಅಲ್ಲಿನ ರೈತರು ಮಾರುಕಟ್ಟೆಗೆ ಕಾಪಿ ಪೂರೈಕೆ ಇಳಿಕೆ ಮಾಡಿದ್ದಾರೆನ್ನಲಾಗಿದೆ. 2023–24 ರಲ್ಲಿ ಜಾಗತಿಕ ರಾಬೆಸ್ಟಾ ಕಾಫಿ ಉತ್ಪಾದನೆ 9.1 ಮಿಲಿಯನ್ ಚೀಲಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ಇದು ಹಿಂದಿನ 10 ವರ್ಷಗಳ ಅಲ್ಲಿನ ಕನಿಷ್ಠ ಉತ್ಪಾದನೆಯಾಗಲಿದೆಯೆನ್ನಲಾಗಿದೆ. ಸಧ್ಯ ಅರೆಬಿಕಾ ಹಾಗೂ ರಾಬೆಸ್ಟಾ ಕಾಫಿ ಜಾಗತಿಕ ದರ ಹೆಚ್ಚಳವಾಗುತ್ತಿದೆ.

## ಬ್ಯಾಡಗಿ ಮೆಣಸು ಮುಂದಿನ ತಿಂಗಳಲ್ಲಿ ಆವಕ ಹೆಚ್ಚಳ ಸಾಧ್ಯತೆ

ಹೊಸ ಬೆಳೆಯ ಬ್ಯಾಡಗಿ ಮೆಣಸು ಮಾರುಕಟ್ಟೆಗೆ ಆವಕವಾಗಲಾರಂಭಿಸಿದ್ದರೂ ಇದುವರೆಗೆ ಹೆಚ್ಚಿನ ಪ್ರಮಾಣದ ಆವಕವಾಗದಿರುವುದರಿಂದ ದರ ಇಳಿಕೆಯಾಗಿಲ್ಲ. ಮುಂದಿನ ತಿಂಗಳಲ್ಲಿ ಆವಕ ಪೂರ್ಣ ಪ್ರಮಾಣದಲ್ಲಿ ಆರಂಭವಾಗಲಿದ್ದು ದರ ಸ್ವಲ್ಪಮಟ್ಟಿನ ಇಳಿಕೆಯಾಗುವ ಸಾಧ್ಯತೆಯಿದೆ. ದೇಶೀ ಹಾಗೂ ರಫ್ತು ಬೇಡಿಕೆ ಹೆಚ್ಚಳವಿರುವುದರಿಂದ ದರ ಉತ್ತಮವಿರಲು ಸಹಾಯಕವಾಗಲಿದೆ.